ಶ್ರೀ ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ಮಂತ್ರಿಗಳು).—

ಅ) ಕಕ್ಕೂರ್ ಏತ ನೀರಾವರಿ ೨ನೇ ಹಂತ ಸುಮಾರು ಮೇ ೧೯೯೧ರೊಳಗೆ ಪೂರ್ತಿಗೊಳಿಸುವ ಸಂಭವವಿರುತ್ತದೆ. ಸಿಂಗಟಾಲೂರಿನ ಏತ ನೀರಾವರಿ ಯೋಜನೆಯ ಎರಡನೇ ಹಂತದ ಪರಿಷ್ಕೃತ ಅಂದಾಜು ತಯಾರಿಸುತ್ತಿದ್ದು, ಯೋಜನೆಯ ಅಂದಾಜಿಗೆ ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ತೆಗೆದುಕೊಳ್ಳಲಾಗುತ್ತದೆ. ಕಕ್ಕೂರು ಏತ ನೀರಾವರಿ ಯೋಜನೆಯ ೧ನೇ ಹಂತದ ನೀರೆತ್ತುವ ಪಂಪುಗಳು ಸರಿಯಾಗಿ ಕೆಲಸ ಮಾಡುತ್ತಿವೆ. ಸಿಂಗಟಾಲೂರು ಏತ ನೀರಾವರಿ ಮೊದಲನೆ ಹಂತದಲ್ಲಿ ೩ ಹೆಂಟ್ರಿಫ್ಯೂಗಲ್ ಪಂಪುಗಳನ್ನು ೧೦ ರಿಂದ ೧೨ ವರ್ಷಗಳ ಹಿಂದೆ ಅಳವಡಿಸಲಾಗಿದ್ದು, ಇದರ ಸಾಮರ್ಥ್ಯ ಕಡಿಮೆಯಾಗಿರುವುದರಿಂದ. ಪಂಪುಗಳನ್ನು ದುರಸ್ತಿಪಡಿಸುವ, ಬದಲಿಸುವ ಕಾರ್ಯವನ್ನು ಹಣದ ಲಭ್ಯತೆಯನ್ನನುಸರಿಸಿ ತೆಗೆದುಕೊಳ್ಳಲಾಗುತ್ತದೆ.

ಆ) ತುಂಗಭದ್ರಾ ಜಲಾಶಯದಲ್ಲಿ ಹೊಸ ಏತ ನೀರಾವರಿ ಯೋಜನೆಗಳಿಗೆ ನೀರೆತ್ತಲು ಅವಕಾಶವಿಲ್ಲದಿರುವುದರಿಂದ ಮುಂಡರಗಿ ತಾಲ್ಲೂಕಿನ ರಾಟಿ ಹಾಗೂ ಅಡವಿ ಹನುಮಾಪ್ಪ ಏತ ನೀರಾವರಿ ಯೋಜನೆಗಳನ್ನು ಕೈಬಿಡಲಾಗಿರುತ್ತದೆ.

ಇ) ಇಲ್ಲ.

ಮುಂಡರಗಿ ತಾಲ್ಲೂಕಿನ ಒಕ್ಕಲುತನ ಹುಟ್ಟುವಳಿ ಮಾರಾಟ ಸಂಘದ ಬಗ್ಗೆ

೬೦. ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).—ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಂಡರಗಿ ತಾಲ್ಲೂಕಿನಲ್ಲಿಯ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘವು (ಟಿ.ಎ.ಪಿ.ಸಿ.ಎಂ.ಎಸ್) ಮುಳುಗುವ ಹಂತಕ್ಕೆ ಬಂದಿದ್ದು ಇದನ್ನು ಯಾವಾಗ ಲಿಕ್ವಿಡೇಶನ್ ಮಾಡಲಾಗುವುದು. ಈ ಬಗ್ಗೆ ಇದುವರೆವಿಗೂ ಸರ್ಕಾರ ಗಮನ ಹರಿಸದಿರಲು ಕಾರಣವೇನು ?

ಆ) ಮುಂಡರಗಿ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ರೈತರಿಗೆ ಸಾಲ ಕೊಡದ ಸ್ಥಿತಿಯಲ್ಲಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ. ಈ ಬಗ್ಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಕೆ. ಹೆಚ್. ಪಾಟೀಲ್ (ಸಹಕಾರ ಸಚಿವರು).—

ಅ) ಮುಂಡರಗಿ ತಾಲ್ಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರ ಸಂಘದ ಕಾರ್ಯಚಟುವಟಿಕೆಗಳು ಸ್ಥಗಿತಗೊಂಡಿದ್ದು, ಈ ಸಂಘದ ೧೯೮೩–೮೪ರ ಲೆಕ್ಕ ಪರಿಶೋಧನಾ ವರದಿಯಲ್ಲಿ ಕೆಲವೊಂದು ಪ್ರಮುಖವಾದ ನ್ಯೂನತೆಗಳು ಕಂಡು ಬಂದಿದ್ದರಿಂದ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೪ರ ಅನ್ವಯ ವಿಚಾರಣೆ ನಡೆಸಿ ವರದಿ ನಡೆಯಲಾಗಿದೆ. ಸದರಿ ವಿಚಾರಣಾ ವರದಿಯ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ ೬೮ರ ಅನ್ವಯ ಅನುಪಾಲನಾ ವರದಿಯನ್ನು ಕಳಿಸಲು ಸಂಘದವರನ್ನು ಕೇಳಿದ್ದು ಅನುಪಾಲನೆ ವರದಿ ಬಂದಿರುವುದಿಲ್ಲವಾದ್ದರಿಂದ ಮುಂದಿನ ಕ್ರಮ ಜರುಗಿಸಿರುವುದಿಲ್ಲ. ಸಂಘದವರಿಂದ ವರದಿ ಬಂದ ನಂತರ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, ೧೯೫೯ ಕಲಂ ೬೩ರ ಪ್ರಕಾರ ಸಂಘವನ್ನು ಸಮಾಪನಗೊಳಿಸಲು ಸೂಕ್ತ ಕ್ರಮತೆಗೆದುಕೊಳ್ಳಲಾಗುವುದು.

ಆ) ಇಲ್ಲ. (ನಬಾರ್ಡ್ ಆರ್ಹತೆ ಪ್ರಕಾರ ನಿರ್ಬಂಧಿತ IVನೇ ಗುಂಪಿನಲ್ಲಿ ಸಾಲಕೊಡಲು ಅರ್ಹತೆ ಹೊಂದಿದೆ). ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಘರ್ಷಣೆಗಳು

೧೬೩. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಇತ್ತೀಚೆಗೆ ಕೋಲಾರ ಜಿಲ್ಲೆಯ ಯಾವ ಯಾವ ಸ್ಥಳಗಳಲ್ಲಿ ಗಲಭೆಗಳು ನಡೆದಿವೆ ?

ಆ) ಈ ಗಲಭೆಗಳಲ್ಲಿ ಮಡಿದವರ ಸಂಖ್ಯೆ ಎಷ್ಟು ? ಹಾಗೂ ಇವರಲ್ಲಿ ಪೋಲೀಸ್ ಗೋಲಿಬಾರಿನಲ್ಲಿ ಮಡಿದವರ ಸಂಖ್ಯೆ ಎಷ್ಟು ?